ಬಗರ್ ಹುಕುಂ ಸಾಗುವಳಿ ಖಾಯಂ ಮಾಡುವುದು

೩೦೫೯. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಂದಾಯ ಇಲಾಖೆ ಜಮೀನಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವ ರೈತರ ಜಮೀನನ್ನು ಖಾಯಂ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೆ,

ಆ) ಹಾಗಿದ್ದರೆ ಇದನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ದಿನಾಂಕ ೧–೭–೧೯೮೪ಕ್ಕಿಂತ ಮುಂಚಿನ ಅನಧಿಕೃತ ಸಾಗುವಳಿಗಳನ್ನು ಸಕ್ರಮಗೊಳಿಸುವ ಉದ್ದೇಶದಿಂದ ಭೂ ಕಂದಾಯ ಕಾಯಿದೆ ೧೯೬೪ಕ್ಕೆ ತಿದ್ದುಪಡಿ ಮಸೂದೆಯನ್ನು ಸದನದ ಮುಂದೆ ಮಂಡಿಸಲಾಗಿದೆ. ಈ ಮಸೂದೆಗೆ ಸದನದ ಒಪ್ಪಿಗೆ ದೊರೆತ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶಿಕಾರಿಪುರ ನಗರದಲ್ಲಿ ಕಟ್ಟುತ್ತಿರುವ ಕಂಬೈಂಡ್ ಆಸ್ಪತ್ರೆ ಕಟ್ಟಡದ ಸ್ಥಿತಿ

೩೦೫೭. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಲೋಕೋಪಯೋಗಿ, ಕಾಡಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿಕಾರಿಪುರ ನಗರದಲ್ಲಿ ಕಟ್ಟುತ್ತಿರುವ ಕಂಬೈಂಡ್ ಆಸ್ಪತ್ರೆ ಕಟ್ಟಡದ ರೂಫಿಂಗ್ ಹಾಕಿದ ಗೋಡೆಗಳು ಬೀಳುವ ದುಸ್ಥಿತಿಗೆ ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸರ್ಕಾರದವರ ಆದೇಶದ ಪ್ರಕಾರ ಈ ಕಟ್ಟಡದ ಕೆಲಸವನ್ನು ಯಾವಾಗ ಪೂರ್ಣಗೊಳಿಸ ಬೇಕಾಗಿದೆ ?

ಇ) ಈ ಕಟ್ಟಡದ ಸಂಪೂರ್ಣ ಕೆಲಸ ಯಾವಾಗ ಮುಗಿಸಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಕಟ್ಟಡದ ಭದ್ರತೆಗೆ ಯಾವ ಧಕ್ಕೆಯೂ ಇಲ್ಲ.

ಆ) ಮತ್ತು ಇ) ಈ ಕೆಲಸವು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿದ್ದು ೧೯೮೯ರಲ್ಲಿ ಮುಗಿಸುವ ನಿರೀಕ್ಷೆ ಇದೆ.

ಉತ್ತರ ಕನ್ನಡದ ''ತದಡಿ''ಯಲ್ಲಿ ಬೆಂಕಿ ಅನಾಹುತ

೨೯೯೦. ಶ್ರೀ ಎನ್. ಹೆಚ್. ಗೌಡ (ಕುಮಟಾ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಏಪ್ರಿಲ್ ತಿಂಗಳಲ್ಲಿ ಉತ್ತರ ಕನ್ನಡದ ಕುಮಟಾ ತಾಲ್ಲೂಕಿನ ತದಡಿ ಗ್ರಾಮದಲ್ಲಿ ಅಗ್ನಿಗೆ ಆಹುತಿಯಾದ ಮೀನುಗಾರರ ಶೆಡ್ಡುಗಳ ಸಂಖ್ಯೆ ಎಷ್ಟು ?

ಆ) ಮೀನುಗಾರರ ಎಷ್ಟು ಕುಟುಂಬಗಳು ಹಾನಿಗೆ ಒಳಗಾಗಿವೆ ?

ಇ) ಅವರಿಗೆ ಆದ ಹಾನಿಯ ಒಟ್ಟು ಅಂದಾಜಿನ ಹಣದ ಮೊತ್ತವೆಷ್ಟು ?

ಈ) ಸರ್ಕಾರವು ಪ್ರತಿಯೊಂದು ಕುಟುಂಬಕ್ಕೆ ನೀಡಿದ ಪರಿಹಾರ ಧನವೆಷ್ಟು, ಹಾಗೂ ಬಿಡುಗಡೆ ಮಾಡಿದ ಒಟ್ಟು ಪರಿಹಾರದ ಮೊತ್ತವೆಷ್ಟು ?

ಶ್ರೀ ಎಸ್. ಆರ್, ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಮೊನಂಗಾರರ ಶೆಡ್ಡುಗಳು : ೬೮
ಸೊಸೈಟಿಯ ಶೆಡ್ಡುಗಳು : ೦೨

ಒಟ್ಟು : ೭೦

ಆ) ೬೮ ಕುಟುಂಬಗಳು

ಇ) ಸುಮಾರು ೧೪, ೧೫, ೬೯೦–೫೦ ರೂಪಾಯಿಂಗಳು

ಈ) ೧) ಪ್ರತಿ ಕುಟುಂಬಕ್ಕೆ ... ರೂ. ೮೦೦.೦೦
೨) ಒಟ್ಟು ಪರಿಹಾರ ... ರೂ. ೩೬,೦೦೦,೦೦

ಹೊರ ರಾಜ್ಯಗಳಿಗೆ ಹೆಣ್ಣು ಮಕ್ಕಳನ್ನು ಸಾಗಿಸುವುದನ್ನು ತಡೆಗಟ್ಟುವುದು

೨೯೩. ಶ್ರೀ ಎಂ. ಶಿವಣ್ಣ (ಹೆಚ್.ಡಿ. ಕೋಟೆ).—ಮಾನ್ಯ ಮುಖ್ಯ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಿಂದ ಹೊರ ರಾಜ್ಯಗಳಿಗೆ ಹೆಣ್ಣು ಮಕ್ಕಳನ್ನು ಸಾಗಿಸುವ ಜಾಲಗಳಿರುವುದು ನಿಜವೇ ? ಹಾಗಿದ್ದಲ್ಲಿ ಎಲ್ಲೆಲ್ಲಿ.

ಆ) ಇದುವರೆಗೆ ಎಷ್ಟು ಹೆಣ್ಣು ಮಕ್ಕಳನ್ನು ಸಾಗಿಸಲಾಗಿದೆ ಎಂಬುದು ಸರ್ಕಾರದಲ್ಲಿ ಅಂಕಿ ಅಂಶಗಳಿವೇನು ?

ಇ) ಈ ಪೈಕಿ ಪತ್ತೆ ಮಾಡಲಾಗಿರುವ ಪ್ರಕರಣಗಳೆಷ್ಟು ?

ಈ) ಎಷ್ಟು ಹೆಣ್ಣು ಮಕ್ಕಳನ್ನು ಪೋಷಕರಿಗೆ ಒಪ್ಪಿಸಲಾಗಿದೆ ಹಾಗೂ ಇಂತಹ ಕೃತ್ಯವನ್ನು ತಡೆಗಟ್ಟಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು). —

ಅ) ನಿಜ. ೧೯೮೬ ರಿಂದ ೧೯೮೮ರ ಪರೆಗಿನ ಮಾಹಿತಿ ಈ ರೀತಿ ಇದೆ.

೧೯೮೬ರಲ್ಲಿ ಒಂದೂ ಪ್ರಕರಣವೂ ಇಲ್ಲ.

೧೯೮೭ರಲ್ಲಿ ಧಾರವಾಡ ಜಿಲ್ಲೆಯ ಗದಗೆನಲ್ಲಿ ಒಂದು ಜಾಲ ಪತ್ತು ಚಿತ್ರದುರ್ಗ ಪಟ್ಟಣದಲ್ಲಿ ಒಂದು ಜಾಲ ಇದ್ದಿದ್ದು ಪತ್ತೆಯಾಗಿದೆ.

೧೯೮೮ರಲ್ಲಿ ಮೈಸೂರು ನಗರದಲ್ಲಿ ಒಂದು ಜಾಲ ಇದ್ದಿದ್ದು ಪತ್ತೆಯಾಗಿದೆ.

ಆ) ೧೯೮೬ರಲ್ಲಿ ಇಲ್ಲ.

೧೯೮೭ರಲ್ಲಿ ಎರಡು ಹೆಣ್ಣು ಮಕ್ಕಳು.

೧೯೮೮ರಲ್ಲಿ ಐದು ಹೆಣ್ಣು ಮಕ್ಕಳು (ಈ ಸಾಗಾಣಿಕೆಗೆ ತುತ್ತಾದ ಪ್ರಕರಣಗಳು ಪೋಲೀಸರಿಗೆ ವರದಿಯಾಗಿದೆ)

ಇ) ೧೯೮೭ರಲ್ಲಿ ಎರಡು ಪ್ರಕರಣಗಳನ್ನು ಮತ್ತು ೧೯೮೮ರಲ್ಲಿ ಐದು ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ.

ಈ) ಎಲ್ಲಾ ಏಳು ಹೆಣ್ಣು ಮಕ್ಕಳನ್ನು ಪೋಷಕರಿಗೆ ಒಪ್ಪಿಸಲಾಗಿದೆ.